ಈ) ತಾಂತ್ರಿಕ ಪರಿಶೀಲನೆ ಪೂರ್ಣಗೊಂಡನಂತರ ವಿವರಗಳು ತಿಳಿದು ಬರುತ್ತವೆ.

ಸರ್ಕಾರಿ ನೌಕರರಿಗೆ ನೇಮಕಾತಿ ನಿರ್ಬಂಧವನ್ನು ತೆಗೆದುಹಾಕುವುದು.

377 - ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ನೌಕರರಿಗೆ ಇರುವ ನೇಮಕಾತಿ ನಿರ್ಬಂಧವನ್ನು ತೆಗೆದುಹಾಕುವ ಬಗ್ಗೆ ಸರ್ಕಾರವು ಆಲೋಚನೆ ಮಾಡಿದೆಯೇ?

ಆ) ಹಾಗಿದ್ದಲ್ಲಿ, ಎಂದಿನಿಂದ ಆ ಆಜ್ಞೆ ಜಾರಿಗೆ ಬರುತ್ತದೆ.

ಇ) ನೇಮಕಾತಿ ನಿರ್ಬಂಧವನ್ನು ಮುಂದುವರೆಸುವುದಾದರೆ ಅದಕ್ಕೆ ಕಾರಣಗಳೇನು? (ವಿವರಗಳನ್ನು ತಿಳಿಸುವುದು)?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ರಾಜ್ಯದಲ್ಲಿ ಆರ್ಥಿಕ ಮಿತವ್ಯಯದ ಕ್ರಮಗಳು ಜಾರಿಯಲ್ಲಿರುವುದರಿಂದ ನೇರ ನೇಮಕಾತಿ ಮಾಡಲು ನಿರ್ಬಂಧವನ್ನು ವಿಧಿಸಲಾಗಿದೆ.

ಶಹಬಾದಿನಲ್ಲಿರುವ ಹೆಚ್.ಎಂ.ಪಿ. ಸಿಮೆಂಟ್ ಕಾರ್ಖಾನೆಯ ಧೂಳಿನಿಂದ ತೊಂದರೆ.

378 ಶ್ರೀ ಬಾಬುರಾವ್ ಚವಾಣ್ (ಶಹಾಬಾದ್): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಹಾಬಾದ್‌ನಲ್ಲಿ ಇರುವ ಹೆಚ್.ಎಂ.ಪಿ. ಸೀಮೆಂಟ್ ಕಾರ್ಖಾನೆಯ ಧೂಳನ್ನು ಹೊರಗೆ ಹಾಕುತ್ತಿರುವುದರಿಂದ ಅಲ್ಲಿಯ ಜನರಿಗೆ ರೋಗ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರಿಂದ ಸುತ್ತ ಮುತ್ತ ಇರುವ ಜಮೀನಿನಲ್ಲಿ ಬೆಳೆಗಳು ನಾಶವಾಗುತ್ತಿದ್ದು ಅದನ್ನು ತಡೆಯಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಬಂದಿದೆ.

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಶಹಾಬಾದ್‌ನಲ್ಲಿರುವ ಹೆಚ್.ಎಂ.ಪಿ. ಸಿಮೆಂಟ್ ಕಾರ್ಖಾನೆಯಿಂದ ಹೊರದೂಡುವ ಧೂಳು ನಿಗಧಿಪಡಿಸಿರುವ ಗುಣಮಾನಕ್ಕಿಂತ ಅತಿಯಾಗಿ ಮೀರಿರುವುದನ್ನು ಕಂಡುಬಂದ ನಂತರ ವಾಯು (ಮಾಲಿನ್ಯ ನಿವಾರಣ ಮತ್ತು ನಿಯಂತ್ರಣ) 1981 ಕಾಯ್ದೆಯ ಕಲಂ 31 (ಎ) ಪ್ರಕಾರ ಸದರಿ ಉದ್ದಿಮೆಯನ್ನು ಮುಚ್ಚುವಂತೆ ದಿನಾಂಕ 2-12-91ರಂದು ಆದೇಶ ನೀಡಿತು. ಈ ಆದೇಶದ ವಿರುದ್ಧ ಉದ್ದಿಮೆಯು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಒಂದು ರಿಟ್ ಅರ್ಜಿಯನ್ನು ಸಲ್ಲಿಸಿ ತಡೆಯಾಜ್ಞೆಯನ್ನು ಪಡೆಯಿತು. ಉಚ್ಚ ನ್ಯಾಯಾಲಯವು ಈ ಅರ್ಜಿಯನ್ನು ವಿಲೇವಾರಿ ಮಾಡುತ್ತ ದಿನಾಂಕ 1-6-92 ರಂದು ಈ ಕೆಳಕಂಡ ತೀರ್ಪು ನೀಡಿತು.

"ಉದ್ದಿಮೆಯು ನ್ಯಾಯಲಯದ ತೀರ್ಪಿನ ದಿನಾಂಕದಿಂದ ಆರು ವಾರದೊಳಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಭಾರತ ಸರ್ಕಾರದ ಪರಿಸರ

ಮತ್ತು ಅರಣ್ಯ ಮಂತ್ರಾಲಯದ ದಿನಾಂಕ 17-12-91ರ ಪತ್ರದ ಪ್ರಕಾರ ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸಲು ಕಾಲಾವಕಾಶವನ್ನು ಕೋರಿ ಅರ್ಜಿ ಸಲ್ಲಿಸುವುದು ಹಾಗೂ ಮಂಡಳಿಯು ಆ ಪ್ರಸ್ತಾವನೆಯನ್ನು ನಾಲ್ಕು ವಾರದೊಳಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದು".

ಇದರಂತೆ ಉದ್ದಿಮೆಯು ಕಿಲ್ನಗಳಿಗೆ ವಾಯು ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸುವ ಪ್ರಸ್ತಾವನೆಯನ್ನು ದಿನಾಂಕ : 30-6-92ರ ಪತ್ರದ ಜೊತೆ ಸಬ್ಬಿಸಿತ್ತು. ಆ ಪತ್ರವನ್ನು ದಿನಾಂಕ 10-7-92ರಂದು ಮಂಡಳಿಯಲ್ಲಿ ಸ್ವೀಕರಿಸಲಾಯಿತು. ಉದ್ದಿಮೆಯು ಈ ಘಟಕಗಳನ್ನು ಅಳವಡಿಸಲು ಭಾರತ ಸರ್ಕಾರದ ಪತ್ರದ ಪ್ರಕಾರ 31-12-1993ರವರೆಗೆ ಕಾಲಾವಕಾಶ ಕೋರಿತು. ಮಂಡಳಿಯು ಉದ್ದಿಮೆಯ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ದಿನಾಂಕ : 7-8-92ರಂದು ಪ್ರಸ್ತಾವನೆಗೆ ಅನುಮೋದನೆ ನೀಡಿ ನಿಗದಿಪಡಿಸಿದ ಗುಣಮಾನಕಗಳನ್ನು ಸಾಧಿಸಲು ಎಲ್ಲಾ ವಾಯು ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸಲು 31-12-93 ರವರೆಗೆ ಕಾಲಾವಕಾಶ ನೀಡಿದೆ.

ಈ ರೀತಿ ನಿಗಧಿ ಪಡಿಸಿದ ಕಾಲಮಿತಿಯೊಳಗೆ ಘಟಕಗಳನ್ನು ಅಳವಡಿಸಿದ್ದಲ್ಲಿ ಕಾನೂನಿನ ಪ್ರಕಾರ ತೆಗೆದುಕೊಳ್ಳಲಾಗುವುದೆಂದು ಉದ್ದಿಮೆಗೆ ತಿಳಿಸಲಾಗಿದೆ.

Collection of Land Revenue

379 - Sri. Shaffi Ahamed (Tumkur): Will the Hon'ble Revenue Minister be pleased to state

a) The total demand, collection, balance of the State (District wise Particulars may be furnised);

b) The arrears outstanding which is more than one lakh (DistrictËwise particulars may be furnished);

c) The target fixed for collection per annum (District-wise details may be furnished)?

M. Rajashekar Murthy (Revenue Minister):

a) District-wise DCB of Land Revenue is furnished in Annexure 'A' and other dues in Annexure 'B'

b) particulars furnished in annexure 'C'

c) Particulars of District-wise target fixed is furnished in Annexure 'D'.